Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 89 | ಸೋಮವಾರ 2—2—48 | ಬಿಡಿ ಪ್ರತಿ 3 ಪೈ

ಶಿವರ ಜೀವಾಪಾಯ ಬಗೆಗೆ ಒಳಸಂಚು !

ಮನ್ಮಹಾರಾಜರವರು ಉಪವಾಸ ಮಾಡಿದರು

ಮೈಸೂರು ಫೆ 2— ಮೈಸೂರು ಶ್ರೀಮನ್ಮಹಾರಾಜರು ಮಹಾತ್ಮಾ ಗಾಂಧೀಜೀ ನಿಧನದ ಪ್ರಯುಕ್ತ ಮೊನ್ನೆ ಶನಿವಾರ ಸಂಪೂರ್ಣ ಉಪವಾಸ ಮಾಡಿದರೆಂದು ಗೊತ್ತಾಗಿದೆ.

ಗಾಂಧಿ ಪ್ರತಿಮೆ

ಮೈಸೂರು ಫೆ 2— ಗಾಂಧೀ ಚೌಕದಲ್ಲಿ ಮಹಾತ್ಮಾಜೀಯವರ ಪ್ರತಿಮೆ ಪ್ರತಿಷ್ಠೆ ಮಾಡುವ ಬಗ್ಗೆ ಕೂಡ್ಕ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದು ಗೊತ್ತಾಗಿದೆ.

ಅನ್ನ ಸಂತರ್ಪಣೆ

ಮೈಸೂರು— ಗಾಂಧೀಜಿಯವರು ನಿಧನರಾದ 13 ನೇ ದಿನದ ಅವರ ಆತ್ಮ ಶಾಂತತೆಗೋಸ್ಕರ ಅರಮನೆಯಿಂದ ಅನ್ನಸಂತರ್ಪಣೆ, ಸುಜಿ ಭೂದಕ್ಷಿಣೆ ದಾನದ ಏರ್ಪಾಡು ಆಗುತ್ತಿದೆಯೆಂದು ತಿಳಿಯಬಂದಿದೆ.

ಕೃಷ್ಣಮೂರ್ತಿಪುರದಲ್ಲಿ ಬಿಕ್ಕಟ್ಟು

ಗಾಂಧಿಯವರೋ ಲ್ಲರೇ ಅಲ್ಲ ನಮ್ಮ ಪಟ್ಟಿಯಲ್ಲಿರುವುದು, ಕಾಂಗ್ರೆಸ್ ನಾಯಕರುಗಳೆಲ್ಲಾ ಇತರರು ಎಂದು ರಾಷ್ಟ್ರೀಯ ಸ್ವಯಂಸೇವಕರೊಬ್ಬರು ಸುಡಿದರೆಂದೂ, ಹಲವರು ಈ ಕೆಟ್ಟ ಮಾತುಗಳನ್ನು ಕೇಳಲಾರದೆ ಕೆಳಿದರೆಂದೂ ಅಲ್ಲಿ ಇಲ್ಲಿ ಸುತ್ತಾಡುತ್ತಿದ್ದ ಮಂದಿ ಸೇರಿದರೆಂದೂ, ಸ್ವಯಂಸೇವಕರು ಓಡಲಾಗಿ ಜನ ಹಿಂದೆ ಓಡಿದರೆಂದೂ ನಿನ್ನೆ ಸಂಜೆ ಈ ಘಟನೆ ನಡೆಯಿತೆಂದೂ ಗೊತ್ತಾಗಿದೆ.

ಬೆಟ್ಟದ ಬುಡಕ್ಕೊಡಿದರು !

ಚಾಮುಂಡಿ ಬೆಡಾವಣೆಯ ರಾಷ್ಟ್ರೀಯ ಸ್ವಯಂಸೇವಕ ಶಾಖೆಯವರಿಗೂ ಕಾಂಗ್ರೆಸ್ಸು ಪ್ರೇಮಿಗಳಿಗೂ ಘರ್ಷಣೆಯಾಯಿತೆಂದೂ, ಸ್ವಯಂಸೇವಕರುಗಳೆಲ್ಲನ ಚಾಮುಂಡಿ ಬೆಟ್ಟದ ಬುಡಕ್ಕೆ ಓಡಿ ಹೋದರೆಂದೂ, ಅಲ್ಲಿ ಸಭೆ ಸೇರಿದ್ದರೆಂದೂ ವದಂತಿಯೊಂದು ತಿಳಿಸುತ್ತದೆ.

ಗಾಂಧೀಜೀಯವರ ಅಗ್ನಿಸಂಸ್ಕಾರಾನಂತರ ಸುತ್ತಮುತ್ತ ಬಿದ್ದಿದ್ದ ಗಂಧದ ಚೂರುಗಳನ್ನೂ, ಬಾಡಿಹೋಗಿದ್ದ ಗುಲಾಬಿ ದಳಗಳನ್ನೂ ಜ್ಞಾಪಕಾರ್ಥವಾಗಿ ಶೇಖರಿಸಿಟ್ಟುಕೊಳ್ಳಲು ನುಗ್ಗಾಡಿದರು.

ಎಲಿಜಬೆತ್ ವಿವಾಹದಲ್ಲಿ ಗಾಂಧೀಜಿ ಇತ್ತ ಮೇಜಿನ ಚೌಕ ಸ್ವತಃ ನೂತಿದ್ದು

ದೆಹಲಿ ಜನ್ಮನ ಘಾಟಿನ ರುದ್ರ ಭೂಮಿಯಲ್ಲಿ ಶನಿವಾರ ಸಂಜೆ ೮ ಗಂಟೆಗೆ ಮಹಾತ್ಮರ ದೇಹ ಟೂದಿಯಾಯಿತು.

ಇಡೀ ವಿಶ್ವದ ವಿವಿಧ ಮೂಲೆಗಳಿಂದಲೂ ಮಹಾತ್ಮರ ಕೊಲೆಯ ಬಗೆಗೆ ಸಂತಾಪಸೂಚಕ ಸಂದೇಶಗಳು ಬಂದಿವೆ ಬರುತ್ತಿವೆ.

ಬೊಂಬಾಯಿ, ಜ 31 — ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾ ಬೆಂಬಲಿಗರಲ್ಲಿ ಘರ್ಷಣೆ ಅಧಿಕಿಸಿ ಗಿರ್ ಗಾಂ ಪ್ರದೇಶದಲ್ಲಿ ಈ ಬೆಳಿಗ್ಗೆ ಪೋಲೀಸರು ಗೋಳೀಬಾರ್ ಮಾಡಿದರು.

ಬೊಂಬಾಯಿ, ಜ 31 — ಹಿಂದೂ ಮಹಾಸಭೆ ಮಾಜಿ ಅಧ್ಯಕ್ಷ ವಿನಾಯಕ ದಾಮೋದರ ಸಾವರ್ಕರ್ ಗೃಹವನ್ನು ಸಾವಿರ ಮಂದಿಯ ಗುಂಪೊಂದು ಹತ್ತು ಮರೆ ಗಂಟೆ ಹೊತ್ತಿನಲ್ಲಿ ಮುತ್ತಿದವು. ಮುತ್ತಿಗೆ ಉಲ್ಬಣಿಸಿದ್ದರಿಂದ ಪೋಲೀಸರು ಸೇನೆಯನ್ನು ಸಹಾಯಕ್ಕೆ ಪಡೆದರು.

ಬೊಂಬಾಯಿ, ಜ 31 — ಮಹಾತ್ಮರ ಕೊಲೆ ಪಿತೂರಿಗೆ ಸೇರಿದವರೆಂದು ಏದು ವ್ಯಕ್ತಿಯನ್ನು ಪೋಲೀಸರು ಅನುಮಾನದ ಮೇಲೆ ದಸ್ತಗಿರಿ ಮಾಡಿದ್ದಾರೆ ಇನ್ನೂ ಹೆಚ್ಚಿನ ದಸ್ತಗಿರಿಗಳ ಸಂಭವವಿದೆ. ಕಾಂಗ್ರೆಸ್ ಪ್ರಮುಖರುಗಳನ್ನೇ ಹೊಡೆದು ಹಾಕಲು ನಡೆದಿರುವ ಪಿತೂರಿ ಪತ್ತೆಗಾಗಿ ಗುಪ್ತಶಾಖೆಯ ಮುಖ್ಯಾಧಿಕಾರಿ ಪೂನಾದಿಂದ ಬೊಂಬಾಯಿಗೆ ವಿಮಾನದಲ್ಲಿ ಹಾರಿಬಿದ್ದಾರೆ.

ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯದರ್ಶಿಯವರು ಶಾಂತಿ ಸಂರಕ್ಷಣಾ ಕಾನೂನಿನ ಅನ್ವಯ ದಸ್ತಗಿರಿಯಾಗಿರುವರೆಂದು ತಿಳಿದು ಬಂದಿದೆ.

ಹಿಂದೆ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಗೆ ಬಾಂಬೆಸೆದವನೂ ಸೇರಿ ಪಿತೂರಿಗಾರರು ಆರು ಮಂದಿ ಎಂದು ಗಾಂಧೀಜಿ ಕೊಲೆಪ್ರಕರಣ ತಿಳಿಸಿದ್ದಾನೆ. ಉಳಿದ ನಾಲ್ವರು ಕೇಂದ್ರ ಸಚಿವ ಮಂಡಲದವರನ್ನು ಕೊಲ್ಲುವ ಉದ್ಯಮದಲ್ಲಿರುವರೆಂದು ತಿಳಿದುಬಂದಿದೆ.

ಕುರುಕ್ಷೇತ್ರ ನಿರಾಶ್ರಿತ ಶಿಬಿರದಲ್ಲಿ ಪಾಕೀಸ್ತಾನದಿಂದ ಬಂದಿರುವ ಎರಡು ಲಕ್ಷ ಮಂದಿಗೆ ವೈಲ್ಪಟ್ಟ ನಿರಾಶ್ರಿತರು ಸೇನಾಧಿಕಾರಿಗಳು ಮತ್ತು ಪ್ರಜಾಧಿಕಾರಿಗಳು ಗಾಂಧೀಜೀಯವರಲ್ಲಿ ಗೌರವ ಸೂಚಿಸುವ ಬಗ್ಗೆ ಮೊನ್ನೆ ಶನಿವಾರ ಸಂಪೂರ್ಣ ಉಪವಾಸ ಆಚರಿಸಿದರು.

ಕೊಲ್ಹಾಪುರ, ಜ 31 — ಮಹಾತ್ಮರ ಮರಣವಾರ್ತೆ ಕೇಳಿದ ಕ್ಷಣವೇ ಕಂಗೆಟ್ಟು ಹೋದ ಜನ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಮಹಾಸಭೆಯ ಕಾರ್ಯಾಲಯ ಗೃಹ ಅಂಗಡಿ ಇತ್ಯಾದಿಗಳನ್ನು ಲೂಟಿ ಮಾಡಿದರು.

ಹೈದರಾಬಾದ್, ಜ 30 — ಮಹಾತ್ಮ ಗಾಂಧೀಜೀ ಗತಿಸಿದ ಸುದ್ದಿ ಮುಟ್ಟುವ ತಕ್ಷಣ ಸ್ಥಳೀಯ ಚಿತ್ರ ಮಂದಿರವೊಂದನ್ನು ಪ್ರದರ್ಶನ ನಿಲ್ಲಿಸಿ ಎಂದು ಜನರು ಹೇಳಿದರು. ಪ್ರದರ್ಶನ ನಿಲ್ಲಿಸುವ ವಿಷಯದಲ್ಲಿ ಎರಡು ಪಕ್ಷಗಳಲ್ಲಿ ಘರ್ಷಣೆಯಾಗಿ ಜನರಿಂದ ಒಬ್ಬನು ಇರಿಯಲ್ಪಟ್ಟನು. ಚಿತ್ರ ಮಂದಿರಗಳ ಮೇಲೆ ಕಲ್ಲುಗಳು ಬೀರಲ್ಪಟ್ಟವು.

ಪೂನಾ, ಜ 31 — ಅರಮನೆಯಿಂದ ಹಿಂದೂ ಮಹಾಸಭೆಯನ್ನು ಪೋಲೀಸರು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದ 'ಕಾಲ್' ದಿನಪತ್ರಿಕೆ ಕಛೇರಿಗೆ ಭಾರಿ ಗುಂಪು ಅಗ್ನಿಯಿಟ್ಟು ಬೆಂದಿಸಿತು. ಪೋಲೀಸರು ಲಾಠಿ ಪ್ರಹಾರ ಮಾಡಿದರು ಅಖಿಲ ಭಾರತ ಹಿಂದೂ ಮಹಾಸಭಾಧ್ಯಕ್ಷ ಶ್ರೀ ಎಲ್. ಬಿ. ಭೂಪಟ್ಕರ್ ಗೃಹಕ್ಕೆ ಗುಂಪು ನುಗ್ಗಿತು ಹಿಂದೂ ಮಹಾಸಭೆ ಕಛೇರಿ ಮುಂತಾದ ಸಂಸ್ಥೆಗಳ ನಾಶವಾಗಿದೆ

ಹಿಂದೂ ಮಹಾಸಭೆ ಸ್ವಯಂಸೇವಕರು ತಮ್ಮ ಕಛೇರಿ ಮುಂದೆ ಸಿಹಿ ಹಂಚಿದ್ದೇ ಬೊಂಬಾಯಿಗಲಭೆಗೆ ಕಾರಣವಿರಬಹುದು ಎಂದು ಗೊತ್ತಾಗಿದೆ.

ಗಾಂಧೀಜಿಯೆಡನೆ ಹೋಗಲಿಚ್ಛಿಸುತ್ತೇನೆಂದು ಬರೆದಿಟ್ಟು ಸಮುದ್ರಕ್ಕೆ ಬಿದ್ದವನೊಬ್ಬನನ್ನು ಮುಂಬಯಿ ಪೊಲೀಸರಿಗೆ ಒಪ್ಪಿಸಲಾಯಿತು.

ಗಾಂಧೀಜಿ ಗಾಳಿವಾರ್ತೆ ಮದಂತಿಯಲ್ಲಿ ಈದಿನ ಹೊಡೆ ಮಾರಾಟವಿಲ್ಲ

ಕೊಲ್ಲಾಪುರದಲ್ಲಿ ಗಲಭೆ ಭೀಕರವಾಗಿದೆ ಸುದ್ದಿ ಹತೋಟಿ ಬಂದಿವೆ.

ಈರೋಡು ಬೆಜವಾಡ ಕೊಲ್ಲಾಪುರಗಳಲ್ಲಿ ಗೋಳೀಬಾರ್ ಜರುಗಿತು

ಮುಂಬಯಿನಲ್ಲಿ ಕರ್ಫ್ಯೂ ಜಾರಿಯಾಯಿತು.

ವೃದ್ಧ ಸ್ತ್ರೀ ಹೇಳಿಕೆ
ಗಾಂಧಿಜಿಗೆ ಗುಂಡು
ಹೊಡೆದನಂತರ

ಪ್ರಾರ್ಥನಾ ಸಭೆಗೆ ಅಡಿಯಿಡುತ್ತಿದ್ದಾಗ ಗಾಂಧೀಜೀ ಗುಂಡಿಗೆ ಆಹುತಿಯಾದರು. ಆ ವೇಳೆಯಲ್ಲಿ ಸುಮಾರು ಐನೂರು ಮಂದಿ ಅಲ್ಲಿದ್ದರು. ವೃದ್ಧ ಸ್ತ್ರೀಯೊಬ್ಬಳು ಅಪರುಗಳ ನಡುವೆ ಇದ್ದಳು. ಗಾಭರಿಯಿಂದ ಏನಿದು ? ಎಂದು ಅವಳು ಜನರನ್ನು ಕೇಳಿದಳು ಮಹಾತ್ಮರಿಗೆ ಗುಂಡು ಬಿದ್ದಿತು ಎಂದು ಜನರು ಅವಳಿಗೆ ಅರುಹಿದರು. ಮಹಾತ್ಮರಿಗೆ ಏನೂ ಅಪಾಯವಾಗುವುದಿಲ್ಲ ನಾಳೆ ಪ್ರಾರ್ಥನಾ ಸಭೆಗೆ ಅವರು ಬರುವರು, ಏನೂ ತಿಳಿವಳಿಕೆ ಇಲ್ಲದೆ ಆ ಮನುಷ್ಯನನ್ನು ಮೇಲೆ ಗುಂಡು ಹಾರಿಸಿಬಿಟ್ಟ. ಆ ವನನ್ನು ಮನ್ನಿಸಬಿಡಿ ಎಂದು ಗಾಂಧೀಜೀ ನಮಗೆ ಹೇಳುತ್ತಾರೆ ಎಂದು ಆ ವೃದ್ಧ ಸ್ತ್ರೀ ಹೇಳಿದಳು.

ಂ ಂ

ಜನತೆಯ ವ್ಯಸನದ ಕ್ರೋಧ

ಬೊಂಬಾಯಿ, ಜ 31 — ಗಿರ್ಗಾಂ ನಲ್ಲಿರುವ ಅಖಿಲ ಭಾರತ ಪಾಕೀಸ್ತಾನ ವಿರುದ್ಧ ಚಳುವಳಿ ಕಛೇರಿಯನ್ನು ಒಂದು ಸಣ್ಣ ಗುಂಪು ನುಗ್ಗಿ ಕುರ್ಚಿ ಮೇಜುಗಳನ್ನು ಹೊರಕ್ಕೆಸದು ಬೆಂಕಿ ಇಟ್ಟರು. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂಮಹಾಸಭೆಯ ಸದಸ್ಯರುಗಳಿಗೆ ಸೇರಿದ ಆಸ್ತಿಗಳನ್ನು ಅಗ್ನಿಗೆ ದಾನ ಕೊಡುವ ಪರಿಣಾಮ ಬಂದವೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಛೇರಿಗೂ ಜನ ನುಗ್ಗಿದರು. ಹಿಂದೂ ಮಹಾಸಭೆ ವೈದ್ಯನೊಬ್ಬನು ಗಲಭೆಗೆ ಸಿಕ್ಕಿದನು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಛೇರಿಯನ್ನು ಪೋಲೀಸರು ಶೋಧಿಸಿ ಸದಸ್ಯನೊಬ್ಬನನ್ನು ಅಧೀನತೆಗೆ ತೆಗೆದುಕೊಂಡರು.

ಂ ಂ

ಮಹಾಸಭಾ ಕಛೇರಿಗೆ ನುಗ್ಗಿ

ಮೈಸೂರು ಫೆ 2

ಹಿಂದೂ ಮಹಾಸಭೆಗೆ ನುಗ್ಗಿರಿ, ಎಂದು ಜನ ಅಲ್ಲಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ಮಹಾಸಭೆ ಕಛೇರಿ ಮೇಲೆ ಭಾರತ ಡೊಮಿನಿಯನ್ ಧ್ವಜ ಹಾರಿಸಬೇಕು ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಎಲ್ಲಿಸಿಕ್ಕಿದರೂ ಬಡಿಯಬೇಕೆಂಬುವಷ್ಟು ಜನತೆ ಕ್ರೋಧಪೂರಿತಗಿದ್ದಾರೆ.

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟದ್ದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮುಂಗಳೂರು

ಬೀಡಿಗಳು

ಜೆ ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್. ಮೈಸೂರು

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪರಸ್ಥಳಕ್ಕೆ

ಅಂಚೆವೆಚ್ಚ ಸೇರಿ ರೂ. 9

ಸೋಮವಾರ ಸಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--13--0

ವುಡ್ ಲ್ಯಾಂಡ್ಸ್

ಕೀರ್ತಿದಾಯಕ 3 ನೆ ವಾರ

DIN-RAAT

ಸ್ನೇಹಪ್ರಭಾ

ಸುರೇಶ್ ಬ್ಯಾನರ್ಜಿ

ಪಾತ್ರವಹಿಸಿರುವ

ದಿನ್-ರಾತ್

(ಅಮೋಘ ಹಿಂದೀ ಚಿತ್ರ)

— Karnataka Films Release —

At Opera

28—1—48 ರಿಂದ

ಕನ್ನಾಂಬಾ, ಚಿನ್ನಪ್ಪ

ಕೃಷ್ಣ, ಮಧುರಂ

ಪಾತ್ರವಹಿಸಿದುವ

ಕನಗಿ

(ತಮಿಳು)

ಪ್ರತಿ ದಿನ 3 ಆಟಗಳು

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ಎಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

" ವಿಟೋಫೆರಿನ್ " ಖಾಯಿಲೆ ಬರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

ಹಡಗು ಮಾರ್ಕಿನ ಹಿಂಗಿನ ಪುಡಿ

ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ತಯಾರಿಸಿದ ಶಾಸ್ತ್ರೀಯ ಪರಿಶುದ್ಧವಾದದ್ದು. ಎಲ್ಲಾ ಸನಾತನ ಸಂಸಾರಗಳಲ್ಲೂ ಉಪಯೋಗಿಸಲರ್ಹವಾದುದು. ಆಹಾರ ಸನಾರ್ಥಗಳಿಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ, ಅತಿ ಸುಮಸೋಹರ ವಾಸನೆಯನ್ನು ಮತ್ತು ರುಚಿಯನ್ನು ಕೊಡುತ್ತದೆ. ದೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದ ಔಷಧಿ. ಒಂದು ಸಲ ಉಪಯೋಗಿಸಿದಲ್ಲಿ ನುತ್ತೆ ಬೇರಾವುದನ್ನೂ ಉಪಯೋಗಿಸದಂತೆ ಮಾಡುವುದಲ್ಲದೇ, ಇದನ್ನೇ ಸದಾ ಉಪಯೋಗಿಸುವಂತೆ ಪ್ರೇರೇಪಿಸುವುದು. ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳೀ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಹಿಂದ ಸೇರು ಅರ್ಧ ಸೇರು, ಒಂದು ಪಲಂ (ಪ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3—8—0

ನಮ್ಮ ಎ ಮತ್ತು ಟಿ. ಜಿ. ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ಶ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ,

ವಲ್ಲಭದಾಸ್ ತೇಜ್ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

Edited, Printed and Publishd by M S Krishna Rao at the Satyavadi Press Chamaraja Agahar Myrsore

Save the Cow

ಗೋ ವಧೆ ನಿಲ್ಲಲಿ